ಯಾದ್ದರಿಂದ ಮುಂದೆ ಬಹಳ ತೊಂದರೆಯಾಗಬಹುದು, ಕಬ್ಬಿನ ಬೆಳೆಗೆ ತೊಂದರೆಯಾಗಬಹುದು ಎಂದು ಮೊದಲಿನ ಕಾರ್ಯಕ್ರಮವನ್ನು ನಿಲ್ಲಿಸಬೇಕಾಯಿತು.

ಶ್ರೀ ಎ. ಜಿ. ಬಂಡೀಗೌಡರು.—5 ಸಾವಿರ ಎಕರೆ ಯಲ್ಲಾದರೂ ಬೆಳೆಯಬೇಕೆಂದು ಪ್ರಯತ್ನಮಾಡಿದಾಗ ಅಂಕಿ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ತೀರ್ಮಾನಮಾಡಲಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲವನ್ನೂ ಗಮನಿಸಿಯೇ ತೀರ್ಮಾನಮಾಡಿತ್ತು, ಟೆಕ್ನಿಕಲ್ ವಿಚಾರವನ್ನು ತಿಳಿದು ಪರಿಶೀಲನೆಮಾಡಿ ಹೇಳಿತ್ತು. ಆದರೆ ಮುಂದೆ ನೀರು ಸಾಲದೆ ಕಷ್ಟವಾಗಬಹುದೆಂಬ ಅಭಿಪ್ರಾಯ ಸೂಪರಿಂಟೆಂಡಿಂಗ್ ಇಂಜಿನಿಯರಿಂದ ಬಂದನಂತರ ಯೋಜನೆಯನ್ನು ಕೈಬಿಡಬೇಕಾಗಿಬಂತು.

ಶ್ರೀ ಎ. ಜಿ. ಬಂಡೀಗೌಡರು.—5 ಸಾವಿರ ಎಕರೆ ಗಳಲ್ಲಿ ಬೆಳೆಯಬೇಕೆಂದು ಹೇಳಿದಾಗ ಟೆಕ್ನಿಕಲ್ ಅಭಿಪ್ರಾಯವನ್ನು ಪಡೆದಿರಲಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪಡೆದಿತ್ತು. ಪವರ್ ಸರಬರಾಯಿಗಾಗಿ ಕೊಡುತ್ತಿದ್ದ 200 ಯೂನಿಟ್ಟನ್ನು ನಿಲ್ಲಿಸಿದರೆ ಸಾಧ್ಯವಾಗಬಹುದೆಂಬ ಅಭಿಪ್ರಾಯವಿತ್ತು.

ಶ್ರೀ ಎ. ಜಿ. ಬಂಡೀಗೌಡರು.—ಈಗ ಪವರ್ ಸರಬರಾಯಿಗಾಗಿ ಹೆಚ್ಚು ನೀರನ್ನು ಕೊಡುತ್ತಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ರಿಸ್ಟ್ರಿಂಗ್ ಸ್ಪೇರ್ಪ್ ಪೂರೈಸುವವರೆಗೆ 900 ಯೂನಿಟ್ ಕೊಡುತ್ತಿದ್ದುದಕ್ಕೆ ಬದಲಾಗಿ 200 ಯೂನಿಟ್ಟನ್ನಾದರೂ ಸ್ವಲ್ಪದಿವಸ ಕೊಡಬೇಕೆಂದು ಕೇಳಿದ್ದರು.

ಶ್ರೀ ಎ. ಜಿ. ಬಂಡೀಗೌಡರು.—ಹಾಗಾದರೆ ಕಾರುರಾಗಿಗೆ ಕೊಡಬೇಕಾಗಿದ್ದ ನೀರನ್ನು ಪವರ್ ಸರಬರಾಯಿಗೆ ಕೊಡುತ್ತಿದ್ದೀರಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ವಲ್ಪ ಭಾಗ ಕೊಡುತ್ತಿದೆ.

ಶ್ರೀ ಎ. ಜಿ. ಬಂಡೀಗೌಡರು.—ಕಾರುರಾಗಿ ಬೆಳೆಯಬೇಕೆಂದು ಹೇಳಿ ಮತ್ತೆ ಬೆಳೆಯಕೂಡದೆಂದು ಮಾಡಿದ್ದರಿಂದ ಮಧ್ಯಕಾಲದಲ್ಲಿ ಕಾರುರಾಗಿಯನ್ನು ಹಾಕಿರುವ ಅನೇಕರಿಗೆ ತೊಂದರೆಯೆಂಬುದು ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎ. ಜಿ. ಬಂಡೀಗೌಡರು.—ಅನೇಕ ಜನರು ಕಾರುರಾಗಿ ಹಾಕಬಹುದೆಂದು ಹೇಳಿದಮೇಲೆ ಹಾಕಿದ ನಂತರ ನೀರು ಕೊಡುವುದಿಲ್ಲವೆಂದು ಹೇಳಿರುವುದು ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಕಬಹುದು ಎಂದು ಹೇಳುವಹಾಗಿದ್ದರೆ ಮೊದಲೇ ಒಂದು ಹೇಳಿಕೆ ಹೊರಡಿಸಿ ಪ್ರಚಾರಮಾಡುತ್ತಿದ್ದೆವು. ಈ ವರ್ಷ ಅವಕಾಶವಿಲ್ಲದ್ದರಿಂದ ಹಾಗೆ ಮಾಡಲಿಲ್ಲ.

ಶ್ರೀ ಎ. ಜಿ. ಬಂಡೀಗೌಡರು.—ಹಾಗಾದರೆ ಈಗ ತಾವು ನೀರು ಕೊಡುವುದಿಲ್ಲವೆಂದು ಹೇಳುವುದಕ್ಕೆ ಮೊದಲು ಅವಕಾಶವಿದೆಯೆಂದು ತಿಳಿದು ಹಾಕಿರುವವರಿಗೆ ನೀರು ಕೊಡುತ್ತೀರೋ ಅಥವ ಅವರ ಬೆಳೆಯನ್ನು ಹಾಳುಮಾಡುತ್ತೀರೊ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದುವೇಳೆ ಹಾಗೆ ಹಾಕಿದ್ದರೆ ಅದನ್ನು ರಕ್ಷಿಸಲು ಪ್ರಯತ್ನಮಾಡುತ್ತೇವೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಕಾರುರಾಗಿಗೆ ಕೊಡಬೇಕಾದ ನೀರನ್ನು ವಿದ್ಯುಚ್ಛಕ್ತಿಗಾಗಿ ಕೊಡಬೇಕೆಂದು ಹೇಳಿದಿರಿ. ಹಾಗಾದರೆ ವಿದ್ಯುಚ್ಛಕ್ತಿ ಮುಖ್ಯವೋ ಅಥವಾ ಆಹಾರಧಾನ್ಯ ಹೆಚ್ಚು ಮುಖ್ಯವೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎರಡೂ ಮುಖ್ಯ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಆಹಾರ ಧಾನ್ಯಕ್ಕೆ ಈಗಿರುವ ಅಭಾವದಲ್ಲಿ ಕೆಲವು ಕೈಗಾರಿಕೆಗಳನ್ನು ನಿಲ್ಲಿಸಿ ಆಹಾರಧಾನ್ಯಕ್ಕೆ ಹೆಚ್ಚು ಪ್ರೋತ್ಸಾಹ ಮಾಡುವುದು ಅನುಕೂಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಹಾರ ಪದಾರ್ಥಗಳನ್ನು ಬೆಳೆಸಲು ಪ್ರಾಶಸ್ತ್ಯ ಕೊಡಬೇಕೆಂಬುದೇನೋ ನಿಜ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗಾದರೆ ಈ ವರ್ಷ ಕೈಗಾರಿಕೆಗಳಿಗೆ ಕೊಡುವ ನೀರನ್ನು ಹಿಂದಿನಂತೆ ಸ್ವಲ್ಪ ಮಟ್ಟಿಗೆ ಹೊಂದಿಕುಮಾಡಿ ಅದನ್ನು ಕಾರುರಾಗಿಗೆ ಕೊಡಲು ಸರ್ಕಾರದವರು ಮನಸ್ಸುಮಾಡುತ್ತಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಷಯವು ಪರ್ಯಾಲೋಚನೆಯಲ್ಲಿದೆ, ಎರಡು ಮೂರು ದಿವಸಗಳಲ್ಲಿ ತೀರ್ಮಾನವಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಮಾರ್ಚಿ ತಿಂಗಳಾದಮೇಲೆ ಕಾರುರಾಗಿ ಹಾಕುವುದರಿಂದ ತರಿ ಬೆಳೆಗೂ ಅನಾನುಕೂಲ ಮತ್ತು ಕಾರುರಾಗಿಗೂ ಅನಾನುಕೂಲ, ಫೆಬ್ರುವರಿ ತಿಂಗಳು ಕಾರುರಾಗಿಗೆ ಅನುಕೂಲ ಎಂಬುದು ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಫೆಬ್ರುವರಿಯಲ್ಲಿ ಹಾಕಿದರೆ ಅನುಕೂಲವೆಂಬುದು ಗೊತ್ತಿದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಕಾಲಾತೀತವಾದರೆ ಕಾರುರಾಗಿಯ ಫಸಲು ಹೆಚ್ಚಾಗಿ ಆಗುವುದಿಲ್ಲ ಮತ್ತು ವಿದ್ಯುಚ್ಛಕ್ತಿಗಿಂತ ಆಹಾರ ಧಾನ್ಯಕ್ಕೆ ಹೆಚ್ಚು ಪ್ರೋತ್ಸಾಹವೀಯಬೇಕು ಎಂದು ತಿಳಿದು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜೋಗಿನಿಂದ ಬೇಗ ಬಂದಿದ್ದರೆ ಸುಲಭವಾಗಿತ್ತು. ಹಾಗೆ ಬಂದಿದ್ದರೆ ಮಾರ್ಚಿ 15 ರೊಳಗೆ ನೀರು ಕೊಡುವುದನ್ನು ನಿಲ್ಲಿಸಬೇಕೆಂದು ಪ್ರಯತ್ನಮಾಡಿತ್ತು. ಆದರೆ ಜೋಗಿನಿಂದ ಬರುವುದು ಸ್ವಲ್ಪ ತಡವಾಗಿದೆ.

Mr. SPEAKER.—Question time is over.

UNSTARRED QUESTIONS.

(to which answers were laid on the table).

Vacancy in the place of Assistant Information Officer.

*Q.—154. Sri V. S. NARAYANA RAO (Bangalore City—General).—

Will the Government be pleased to state.—

(*a*) whether there is a vacancy in the place of the Assistant Information Officer ; since how long it is vacant ;

(SRI V. S. NARAYANA RAO.)

(*b*) whether the vacancy was not advertised and applications called for; how many applications were received;

(*c*) how many were selected and interviewed; their names and qualifications;

(*d*) the emolument that this post carries;

(*e*) whether it is their intention to abolish this post as a matter of retrenchment?

A.—**The Hon'ble Sri K. CHENGALARAYA REDDY** (Chief Minister).—

(*a*) Yes. There is a sanctioned appointment not filled since 10th December 1949.

(*b*) The vacancy was advertised and 76 applications were received.

(*c*) 21 candidates. This cannot be disclosed at this stage.

(*d*) The post carries a scale pay of Rs. 200–25–300 per mensem.

(*e*) The matter is engaging the attention of Government.

Implementing the recommendations of the Committee to examine Causes for depletion of water in the K. R. S. Reservoir.

Q.*—167 *Mushir-ul-Mulk* **J. MOHAMED IMAM (Tumkur *cum* Chitaldrug—Muslim).—

Will the Government be pleased to state.—

(*a*) if they have received the report on Krishnarajasagar Reservoir by the Special Committee constituted in May 1950 to examine the causes for the depletion of water;

(*b*) what action has been taken so far on their recommendations;

(*c*) whether the report will be placed before this House?

A.—**The Hon'ble Sri T. MARIAPPA** (Home Minister).—

(*a*) Yes.

(*b*) Steps are being taken to implement the recommendations of the Committee before the next monsoon irrigation commences.

(*c*) The report is in the hands of members. This was distributed at the last meeting.